I/250876/2022

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಖಜಾನೆ-2 PFMS ಮಾಡ್ಯೂಲ್ ಅನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ:-

Eoffice ಕಡತ ಸಂಖ್ಯೆ:K-2 TNMCOMIS(mis)/6/2020.

*********

ಪ್ರಸ್ತಾವನೆ:-

ಮೇಲೆ ಓದಲಾದ ಖಜಾನೆ ಆಯುಕ್ತರ ಕಡತದಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ IFMS ಮಾಡ್ಯೂಲ್-ಮಾದರಿ 4 ಅನ್ನು ಅಳವಡಿಸಿಕೊಳ್ಳುವ ಸಲುವಾಗಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಭಂದಿಸಿದಂತೆ ಬಿಡುಗಡೆಯಾಗುವ ಕೇಂದ್ರ ಮತ್ತು ರಾಜ್ಯದ ಪಾಲುಗಳನ್ನು ಪ್ರತಿ ಯೋಜನೆಗೆ ಗೊತ್ತುಪಡಿಸಿದ SNA ಖಾತೆಗೆ ಜಮೆ ಮಾಡುವುದು ಹಾಗೂ ಯೋಜನೆಗೆ ಸಂಬಂಧಿಸಿದ ಪಾವತಿಗಳನ್ನು ಈ SNA ಖಾತೆಯ ಮೂಲಕ ನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.

2) ಮುಂದುವರೆದು, ಖಜಾನೆ 2 ಯೋಜನೆಯು, ಎರಡು ಪ್ರತ್ಯೇಕ ಸಂಸ್ಕರಣೆಗಳ ಮೂಲಕ ಡಿಡಿಓ ಹಾಗೂ ಡಿಡಿಓ ರಲ್ಲದವರಿಗೆ (Non DDOs) ಕೇಂದ್ರ ಪುರಸ್ಕೃತ ಯೋಜನೆಗಳ ವಹಿವಾಟುಗಳನ್ನು ನಡೆಸಲು ಅನುಕೂಲ ಕಲ್ಪಿಸಲಿದೆ. ಡಿಡಿಓರವರು ಅನುಕಲನದ (Integration) ಮೂಲಕ ಡಿಬಿಟಿ ವೇದಿಕೆಯಿಂದ ಫಲಾನುಭವಿ ಡೇಟಾವನ್ನು ಪಡೆದು ಕ್ಲೈಮ್‌ಗಳನ್ನು ಸಿದ್ಧ ಪಡಿಸಬಹುದಾಗಿದೆ. PFMS ನಿಗದಿಗೊಳಿಸಿರುವಂತೆ ಅನುದಾನ ಬಿಡುಗಡೆ ಮತ್ತು ವೆಚ್ಚಗಳ ವಿವರಗಳನ್ನು ದೈನಂದಿನ ಆಧಾರದ ಮೇಲೆ ಅನುಕಲನದ (Integration) ಮೂಲಕ ಹಂಚಿಕೊಳ್ಳಲಾಗುತ್ತದೆ. ಈ ಕುರಿತು ಖಜಾನೆ 2 ರಲ್ಲಿ K II PFMS ಮಾಡ್ಯೂಲಿನ ಅಪ್ಲಿಕೇಶನ್‌ಅನ್ನು ಅಭಿವೃದ್ಧಿಗೊಳಿಸಲಾಗಿದೆ ಎಂದು ತಿಳಿಸಿರುತ್ತಾರೆ.

3) ಇದರ ಅನುಷ್ಠಾನದ ಪೂರ್ವಭಾವಿಯಾಗಿ ನಿರ್ದೇಶನಾಲಯಗಳು ತಮ್ಮ ಇಲಾಖೆಗಳು ನಿರ್ವಹಿಸುವ ಯೋಜನೆಗಾಗಿ S N A ಹಾಗೂ ಅನುಷ್ಠಾನಾಧಿಕಾರಿಗಳನ್ನು ( I A ) ಆಯಾ S L S ಗಾಗಿ PFMS ನಲ್ಲಿ ನೋಂದಾಯಿಸಬೇಕು ಮತ್ತು ಮೊದಲ ಹಂತದ ಏಜೆನ್ಸಿಯನ್ನು ಅಂದರೆ S N A ಅನ್ನು ಮ್ಯಾಪಿಂಗ್ ಮಾಡಿರಬೇಕಾಗಿರುತ್ತದೆ ಎಂದು ತಿಳಿಸುತ್ತಾ, ಎಲ್ಲಾ ಇಲಾಖೆಗಳು ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ ಸೂಚನೆಗಳನ್ನು ನೀಡುವಂತೆ ಹಾಗೂ K-II ರ PFMS Module ಅನ್ನು ಅನುಮೋದಿಸಲು ಸರ್ಕಾರವನ್ನು ಕೋರಿರುತ್ತಾರೆ.

4) ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಆಇ 39 ಟಿಎಆರ್ 2022
### ಬೆಂಗಳೂರು, ದಿನಾಂಕ: 28-04-2022.

ಖಜಾನೆ ಆಯುಕ್ತರು ಪ್ರಸ್ತಾವನೆಯಲ್ಲಿ ಮೇಲ್ಕಂಡಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು ಖಜಾನೆ-2 PFMS ಮಾಡ್ಯೂಲ್ ನಲ್ಲಿ ನಿರ್ವಹಿಸಲು ಅನುವಾಗುವಂತೆ K II PFMS ಮಾಡ್ಯೂಲ್ ಅನ್ನು ಅನುಷ್ಠಾನಗೊಳಿಸಲು ತಾತ್ವಿಕ ಸಹಮತಿ ನೀಡಿ ಆದೇಶಿಸಿದೆ.

ಕೇಂದ್ರ ಪುರಸ್ಕೃತ ಯೋಜನೆಗಳನ್ನು ಜಾರಿಗೊಳಿಸುವ ಎಲ್ಲಾ ಸರ್ಕಾರಿ ಹಾಗೂ ಯೋಜನೆಗಳನ್ನು

ಅನುಷ್ಠಾನಗೊಳಿಸುವ ಸರ್ಕಾರೇತರ ಸಂಸ್ಥೆಗಳು ಸಂಬಂಧಿಸಿದ ವಹಿವಾಟುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸದರಿ ಮಾಡ್ಯೂಲ್ ನಲ್ಲಿ ನಿರ್ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

K-II ರ PFMS Module ಅನುಷ್ಠಾನದಲ್ಲಿ ವಿವಿಧ ಇಲಾಖೆಗಳು ನಿರ್ವಹಿಸಬೇಕಾದ ಚಟುವಟಿಕೆಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಈ ಮಾಡ್ಯೂಲಿನ ಕುರಿತು ಖಜಾನೆ 2 ರ ಪಿ.ಎಮ್.ಯು ಘಟಕವು ಮೇ ಮಾಹೆಯಲ್ಲಿ ಅವಶ್ಯಕ ತರಬೇತಿಗಳನ್ನು ನೀಡಲಿದೆ. ಯಾವುದೇ ಮಾಹಿತಿ/ಸ್ಪಷ್ಟೀಕರಣಕ್ಕಾಗಿ ಖಜಾನೆ ಆಯುಕ್ತಾಲಯದ PFMS ಶಾಖೆಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
**Signed by Shobha Ha**
**Date: 28-04-2022 11:48:35**
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ/ಕಾರ್ಯದರ್ಶಿಗಳು.
5. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
6. ಯೋಜನಾ ನಿರ್ದೇಶಕರು, ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ-2, (HRMS-2.0) 5 ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು/ ಮುಖ್ಯ ಲೆಕ್ಕಾಧಿಕಾರಿಗಳು.
9. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
10. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ., ಖನಿಜ ಭವನ ಬೆಂಗಳೂರು.
11. ಎಲ್ಲಾ ಜಿಲ್ಲಾ ಖಜಾನೆಗಳಿಗೆ- ಖಜಾನೆ ನಿರ್ದೇಶಕರ ಮೂಲಕ.
12. ಎಲ್ಲಾ ಏಜೆನ್ಸಿ ಬ್ಯಾಂಕುಗಳಿಗೆ-ಆಯಾ ಜಿಲ್ಲಾ ಖಜಾನೆಗಳ ಮೂಲಕ .
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

I/250869/2022

## ಅನುಬಂಧ-1

### ಕೆ-2 PFMS ಮಾಡ್ಯೂಲ್ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳು ನಿರ್ವಹಿಸಬೇಕಾದ ಚಟುವಟಿಕೆಗಳು:

**ಖಜಾನೆಗಳಿಂದ ನಿರ್ವಹಿಸಬೇಕಾದ ಚಟುವಟಿಕೆಗಳು:**

**1. ಕೇಂದ್ರ ಪುರಸ್ಕೃತ ಯೋಜನೆಗಳ ನೊಂದಣಿ**

- ಬಳಕೆದಾರರ ಸೃಜನೆ: SPMU ನಿಯಂತ್ರಕರು, SPCU, ರಾಜ್ಯ ಆರ್ಥಿಕ ಇಲಾಖೆಯ ಬಳಕೆದಾರರು, ರಾಜ್ಯ ಯೋಜನೆ ನಿರ್ವಾಹಕರು (SSM) ಏಜೆನ್ಸಿ ಅನುಮೋದಕರು ಹಂತ-2
- SLS ಹಾಗೂ ಸಂವಾದಿ ಹಾಗೂ ಲೆಕ್ಕ ಶೀರ್ಷಿಕೆಗಳು (ಕೇಂದ್ರ ಹಾಗೂ ರಾಜ್ಯ ಪಾಲುಗಳು) PFMS ನಲ್ಲಿ ಸರಿಯಾಗಿ ಮ್ಯಾಪಿಂಗ್ ಆಗಿರುವ ಕುರಿತು TRSY03 ವರದಿಯ ವಿವರಗಳನ್ನು ಪಡೆದು ಖಚಿತಪಡಿಸಿಕೊಳ್ಳುವುದು.
- PFMS ಮತ್ತು ಖಜಾನೆ-2ರಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳ ರಾಜ್ಯ ಮತ್ತು ಕೇಂದ್ರ ಬಿಡುಗಡೆಗಳ ಲೆಕ್ಕ ಶೀರ್ಷಿಕೆಗಳನ್ನು CSS ಯೋಜನೆಗೆ ಮ್ಯಾಪಿಂಗ್ ಮಾಡುವುದು.
- ಯೋಜನಾ ನಿರ್ವಹಣಾ ಘಟಕವು ಹೊಸ ಯೋಜನೆಗಳನ್ನು ನೊಂದಣಿ ಮಾಡುವುದು ಮತ್ತು ನಿಷ್ಕ್ರಿಯ ಯೋಜನೆಗಳನ್ನು ನಿಷ್ಕ್ರಿಯೆಗೊಳಿಸುವುದು.
- ಹಣಕಾಸು ವಿನ್ಯಾಸವನ್ನು ಸಂಯೋಜಿಸುವುದು.
- PFMS ನಲ್ಲಿ ಹಣಕಾಸು ವಿನ್ಯಾಸದೊಂದಿಗೆ ಹೊಸ ಯೋಜನೆಗಳನ್ನು ನೊಂದಾಯಿಸುವುದು.
- ಕೇಂದ್ರ ಪುರಸ್ಕೃತ ಯೋಜನೆಗಳನ್ನು ಇಲಾಖೆಗಳಿಗೆ ಮ್ಯಾಪಿಂಗ್ ಮಾಡುವುದು ಹಾಗೂ ಸಂಪರ್ಕ ವಿವರಗಳನ್ನು ಪಡೆಯುವುದು.
- CCO ರವರು ಡಿಡಿಓ ಗಳಿಗೆ 2 MPAS ಲೆಕ್ಕ ಶೀರ್ಷಿಕೆಗಳಲ್ಲಿ ರಾಜ್ಯ ಮತ್ತು ಕೇಂದ್ರದ ಪಾಲುಗಳನ್ನು ಬಿಡುಗಡೆ ಮಾಡುವರು. ಸದರಿ ಮೊತ್ತವನ್ನು SNA ಖಾತೆಗಳಿಗೆ ಹೊಂದಾಣಿಕೆ ಮಾಡುವುದು.
- SNA ಖಾತೆಗಳ ಹಾಗೂ ಮ್ಯಾಪಿಂಗ್ ಆಗಿರುವ ಅನುಷ್ಠಾನ ಅಧಿಕಾರಿಗಳ ವಿವರಗಳನ್ನು ಪಡೆಯುವುದು.
- ಸಂಬಂಧಿಸಿದ ಡಿಡಿಓ ರವರನ್ನು PFMS ಮತ್ತು ಖಜಾನೆ-2ರ ಮಾಸ್ಟರ್ ಗಳಿಗೆ ಮ್ಯಾಪಿಂಗ್ ಮಾಡುವುದು.
- ಇಲಾಖೆಗಳಿಂದ ವೇತನ ವೆಚ್ಚಗಳನ್ನು ಯಾವ ರೀತಿ ಭರಿಸಲಾಗುವುದು ಎಂಬ ಮಾಹಿತಿಯನ್ನು ಪಡೆದು, ಬಿಲ್ ಕ್ಲೈಂ ವಿಧವನ್ನು ಮ್ಯಾಪಿಂಗ್ ಮಾಡುವುದು.

**2. 2021-22ನೇ ಸಾಲಿನ ಲೆಕ್ಕ ಸಮನ್ವಯೀಕರಣ:**

- ಅನುದಾನ ಬಿಡುಗಡೆಗಳು ಹಾಗೂ ವೆಚ್ಚಗಳ ಪ್ರತಿಯಾಗಿ ಶಿಲ್ಕಿನ ಹಾಗೂ ಬಡ್ಡಿ ಸಂಗ್ರಹಣೆ/ಸಂದಾಯಗಳ ಸಮನ್ವಯೀಕರಣ ಹಾಗೂ ಆರ್ಥಿಕ ಇಲಾಖೆಗೆ ವರದಿಸುವುದು.
- 2021-22ನೇ ಸಾಲಿಗೆ ವೇತನ ವೆಚ್ಚಗಳನ್ನು ಗುರುತಿಸುವುದು.
- ಮಾರ್ಚ್ 31 ರಂತೆ ಬಡ್ಡಿ ಸಂಗ್ರಹಣೆ ಹಾಗೂ ಶಿಲ್ಕುಗಳ ಕುರಿತು ಬ್ಯಾಂಕಿನೊಂದಿಗೆ ಸಮನ್ವಯೀಕರಣ ಹಾಗೂ ಆರ್ಥಿಕ ಇಲಾಖೆಗೆ ವರದಿಸುವುದು.
- SNA ಖಾತೆಗಳನ್ನು ಖರ್ಚು ಹಾಕಿ ಮರುಪಾವತಿ ಕಡಿತಗಳ ಹೊಂದಾಣಿಕೆ ಮೇಲ್ವಿಚಾರಣೆ ನಡೆಸುವುದು ಹಾಗೂ ಆರ್ಥಿಕ ಇಲಾಖೆಗೆ ವರದಿಸುವುದು.

172 24.10.105

**ಆರ್ಥಿಕ ಇಲಾಖೆಯಿಂದ ನಿರ್ವಹಿಸಬೇಕಾದ ಚಟುವಟಿಕೆಗಳು:**

1. **ಮಾಸ್ಟರ್ ದತ್ತಾಂಶದ ಅಪ್ಡೇಷನ್**

- ನಿಷ್ಕ್ರಿಯಗೊಳಿಸಿದ ಹಾಗೂ ಹೊಸದಾಗಿ ಸೇರ್ಪಡೆಯಾದ, 2022-23ನೇ ಸಾಲಿನಲ್ಲಿ ನಿರ್ವಹಿಸುವ ಯೋಜನೆಗಳ ಪಟ್ಟಿ
- ಕೇಂದ್ರ ಮತ್ತು ಸರ್ಕಾರದ ಪಾಲುಗಳಿಗೆ ಲೆಕ್ಕ ಶೀರ್ಷಿಕೆಗಳನ್ನು ನಿಗದಿಪಡಿಸುವುದು.
- ವೇತನ ವೆಚ್ಚಗಳಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆ ನಿಗದಿಪಡಿಸುವುದು.

**ಎಲ್ಲಾ ಕೇಂದ್ರ ಪುರಸ್ಕೃತ ಯೋಜನೆಗಳನ್ನು K-II-PFMS Module ನಲ್ಲಿ ನಿರ್ವಹಿಸುವ ಸಲುವಾಗಿ ಇಲಾಖೆಗಳಿಂದ ನಿರ್ವಹಿಸಬೇಕಾದ ಚಟುವಟಿಕೆಗಳು:**

- SNA ಹಾಗೂ ಅನುಷ್ಠಾನ ಅಧಿಕಾರಿಗಳನ್ನು PFMS ನಲ್ಲಿ ಸಂಬಂಧಿಸಿದ SLS ಪ್ರತಿಯಾಗಿ ನೊಂದಾಯಿಸುವುದು ಹಾಗೂ ಪ್ರಥಮ ಹಂತದ ಏಜೆನ್ಸಿಯನ್ನು ಮ್ಯಾಪಿಂಗ್ ಮಾಡುವುದು.
- SNA ಹಾಗೂ ಅನುಷ್ಠಾನ ಅಧಿಕಾರಿಗಳ ಡಿಡಿಓ ಗಳನ್ನು ಮ್ಯಾಪ್ ಮಾಡಲು ಸಂಬಂಧಿಸಿದ ವಿವರಗಳನ್ನು ಖಜಾನೆಗೆ ನೀಡುವುದು.
- ಅನುಷ್ಠಾನ ಅಧಿಕಾರಿಗಳು ಹಾಗೂ ಅವರ ಬ್ಯಾಂಕ್ ವಿವರಗಳನ್ನು PFMS ಹಾಗೂ ಖಜಾನೆ-2/NTT ಯಲ್ಲಿ ನೊಂದಾಯಿಸುವುದು.
- ಎಲ್ಲಾ SNA ಖಾತೆಗಳನ್ನು ಸ್ವೀಕರ್ತನ ವಿಧ-34 ರಲ್ಲಿ ನೊಂದಾಯಿಸುವುದು ಹಾಗೂ ಎಲ್ಲಾ ಹಳೆಯ ಸ್ವೀಕರ್ತರನ್ನು ನಿಷ್ಕ್ರಿಯಗೊಳಿಸುವುದು.

**Signed by Shobha Ha**
**Date: 28-04-2022 11:47:09**

(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ)